## ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ಇ-ಸ್ವತ್ತು ತಂತ್ರಾಂಶದ ಮೂಲಕ ವಿತರಿಸುವ ನಮೂನೆ 9, 11ಎ ಮತ್ತು 11ಬಿ ಗಳ ಸಮಸ್ಯೆಗಳಿಗೆ ಸಂಬಂಧಿಸಿದ ಉತ್ತರ:

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| 1 | ಆಸ್ತಿಯ ಮೇಲೆ ಇರುವ ಸಾಲದ ದಾಖಲೆ ಹೇಗೆ ಮಾಡುವುದು ? ಮೋಣಿಗಾರಿಕೆಯಲ್ಲಿ ಹಾಕಿದರು ಸಹ ನಮೂನೆ 9, 11ಎ ದಲ್ಲಿ ಬರುವುದಿಲ್ಲ. | 9ಎ ವಹಿಯು ಡಾಟಾ ಬೇಸ್ ಆಗಿದ್ದು ಹಕ್ಕುಗಳು ಮತ್ತು ಬಾದ್ಯತೆಗಳನ್ನು ದಾಖಲಿಸಬಹುದಾಗಿದೆ. 9. 11ಎ ಮತ್ತು 11ಬಿ ಗಳು 9ಎ ನಮೂನೆಯ ಸಬ್‌ಸೆಟ್ ಆಗಿರುತ್ತದೆ. ನಿಯಮಗಳಲ್ಲಿ ನಿಗದಿಪಡಿಸಿರುವ ನಮೂನೆಗಳಲ್ಲಿ ಬಾದ್ಯತೆಗಳನ್ನು ದಾಖಲಿಸಲು ಕಾಲಂ ಇಲ್ಲದಿರುವುದರಿಂದ ತೋರಿಸಿರುವುದಿಲ್ಲ. |
| 2 | 1987 ಗಿಂತ ಮೊದಲು ಎನ್ ಎ ಆದ ಸರ್ವೆ ನಂ ನಲ್ಲಿ ಆಸ್ತಿಗಳನ್ನು ದಾಖಲ್ಲು ಮಾಡಬಹುದೆ. ಹಾಗಾದರೆ ಯಾವ ಯಾವ ದಾಖಲೆಗಳನ್ನು ಪಡೆಯಬೇಕು. | ಸ್ಥಳೀಯ ಯೋಜನಾ ಪ್ರಾಧಿಕಾರ ಅಸ್ತಿತ್ವಕ್ಕೆ ಬರುವ ಮೊದಲು ಅಥವಾ ದಿ:16-11-1992 ರ ಮೊದಲು ಭೂ ಪರಿವರ್ತನೆ (ಎನ್.ಎ) ಆಗಿದ್ದಲ್ಲಿ ಅಂತಹ ಆಸ್ತಿಗಳಿಗೆ ನಮೂನೆ 9 / 11ಎ ನೀಡಬಹುದು. ತದನಂತರ ಭೂ ಪರಿವರ್ತನೆ (ಎನ್.ಎ) ಆಗಿದ್ದಲ್ಲಿ ನಮೂನೆ 11ಬಿ ನೀಡಬಹುದು. ನಮೂನೆಯಲ್ಲಿ ತಿಳಿಸಿರುವ ಸಂಬಂಧಿಸಿದ ದಾಖಲೆಗಳನ್ನು ಪಡೆಯಬಹುದು. |
| 3 | ಗ್ರಾಮಠಾಣಾ ನಕ್ಷೆಯನ್ನು ತಹಶೀಲ್ದಾರ/RI ನೀಡಲು ವಿಳಂಬವಾದರೆ VA ಗಳಿಂದ ಪಡೆಯಬಹುದೇ? | ಅವಕಾಶವಿರುವುದಿಲ್ಲ. ದಿ:03-02-2014 ರ ಸುತ್ತೋಲೆಯನ್ವಯ ತಹಶೀಲ್ದಾರ / ಕಂದಾಯ ಪರಿವೀಕ್ಷಕರು ಗ್ರಾಮಠಾಣಾ ದೃಢೀಕರಣ ನೀಡಬೇಕು. |
| 4 | ಇ-ಸ್ವತ್ತು ಮೂಲಕ ಒಮ್ಮೆ ವಿತರಿಸಿದ ನಮೂನೆ 9, 11ಎ ಗಳನ್ನು ಸಬ್‌ರಿಜಿಸ್ಟಾರ್ ಆಫೀಸ್‌ನಲ್ಲಿ ಖರೀದಿಸಿದ ನಂತರ ಖರೀದಿ ಮಾಡಿದ ನಂತರ ಮಾಲಿಕರ ಹೆಸರನ್ನು ಯಾವ ರೀತಿ ದಾಖಲಿಸಬಹುದು ? | ಸ್ವಾಪ್-ಗ್ಯಾಪ್ ಮ್ಯೂಟೇಷನ್ ಮಾಡ್ಯೂಲ್ ಅನ್ನು ಉಪಯೋಗಿಸಿ, ಮಾಲೀಕರ ಹೆಸರನ್ನು ದಾಖಲಿಸಬಹುದು. |
| 5 | ಗ್ರಾಮಠಾಣಾ ನಕ್ಷೆ ನೀಡಲು ಕಂದಾಯ ಇಲಾಖೆಯವರು ಸ್ಪಂದಿಸುತ್ತಿಲ್ಲಾ. | ಕಂದಾಯ ಇಲಾಖೆಯು ಸುತ್ತೋಲೆ ಸಂಖ್ಯೆ: ಕಂಇ 146 ಎಎಸ್‌ಡಿ 2013 ದಿ:14-06-2013 ರಂತೆ ತಹಶೀಲ್ದಾರವರು ಸರ್ವೆ ಮಾಡಿಸಿ, ಗ್ರಾಮಠಾಣಾ ವ್ಯಾಪ್ತಿಯೊಳಗೆ ಇರುವ ಬಗ್ಗೆ ದೃಢೀಕರಣ ನೀಡಲು ತಿಳಿಸಲಾಗಿರುತ್ತದೆ. |
| 6 | ಒಬ್ಬ ವ್ಯಕ್ತಿಯು ದಿ: 14-06-2013 ರ ಮೊದಲು 2 ಎಕರೆ ಜಮಿನನ್ನು ಭೂ ಪರಿವರ್ತನೆ ಮಾಡಿಕೊಂಡು ಪ್ರಸ್ತುತ ಆ ಜಾಗದಲ್ಲಿ 15-20 ಭಾಗ ಮಾಡಿ (ಸೈಟ್ ನಿರ್ಮಿಸಿ) 9. 11 ನ್ನು ನೀಡಲು ಕೋರಿದರೆ ಅನುಸರಿಸಬೇಕಾದ ವಿಧಾನ ಅಥವಾ ನೀಡಲು ಅವಕಾಶವಿದೆಯೆ ? ಪಹಣಿ ಪತ್ರಿಕೆಯಲ್ಲಿ - 2 ಎಕರೆ ಇದೆ. 9. 11 ರ ನಮೂನೆ -ನಿವೇಶನ ವಿಸ್ತೀರ್ಣದಲ್ಲಿ -ಎಷ್ಟನ್ನು ದಾಖಲ್ಲು ಮಾಡಬೇಕು. | ಉದ್ದೇಶಿತ ಜಮೀನು ಸ್ಥಳೀಯ ಯೋಜನಾ ಪ್ರಾಧಿಕಾರ / ನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯತಿಗಳು ಸಂಬಂಧಪಟ್ಟ ಸ್ಥಳೀಯ ಯೋಜನಾ / ನಗರ ಯೋಜನಾ ಪ್ರಾಧಿಕಾರದಿಂದ ಲೇಔಟ್ ನಕ್ಷೆಗಳಿಗೆ ಅನುಮೋದನೆ ಪಡೆಯಬೇಕು. ಸ್ಥಳೀಯ ಯೋಜನಾ ಪ್ರಾಧಿಕಾರದ ಹೊರಗಡೆ ಇರುವ ಪ್ರದೇಶಗಳ ಲೇಔಟ್‌ಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ತಾಲ್ಲೂಕು ಪಂಚಾಯತಿಗಳಿಗೆ ನೀಡಲು ಸರ್ಕಾರವು ತೀರ್ಮಾನಿಸಿದ್ದು, ಈ ಬಗ್ಗೆ ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಲಾಗುತ್ತಿದೆ. |

| | | |
|---|---|---|
| 7 | ಈಗಾಗಲೇ ಭೂಪರಿವರ್ತತ ಜಮೀನಿನ ನಮೂನೆ 9, 11 ನ್ನು ನೀಡಿದ್ದು ಆ ಜಮೀನಿಗೆ ಸಂಬಂಧಿಸಿದಂತೆ ವಿಂಗಡಿಸಿ 9, 11 ನೀಡಲು ಅರ್ಜಿ ಸಲ್ಲಿಸಿದಲ್ಲಿ ನೀಡುವ ಕ್ರಮ. | ಲೇಔಟ್ ನಕ್ಷೆ ಅನುಮೋದಿತವಾಗಿದ್ದರೆ ನಮೂನೆ 9 ಮತ್ತು 11ಎ ನ್ನು ನೀಡಬಹುದು. ಇಲ್ಲದಿದ್ದರೆ ಇಡೀ ಜಮೀನಿಗೆ 11ಬಿ ನ್ನು ನೀಡಬಹುದಾಗಿದೆ. |
| 8 | ಇ-ಸ್ವತ್ತು ಯೋಜನೆಯಡಿಯಲ್ಲಿ ಸರ್ಕಾರಿ ಜಾಗ, ದೇವಾಸ್ಥಾನ, ಮಸೀದಿ, ಶಾಲಾ ಕಟ್ಟಡಗಳ ಮತ್ತು ಇತರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕ ಆಸ್ತಿಗಳ ದಾಖಲು ಮಾಡುವಲ್ಲಿ ಸಂಬಂಧಿಸಿದ ಆಸ್ತಿಯ ಮಾಲೀಕರ ಹೆಸರು ಮತ್ತು ಛಾಯಾ ಚಿತ್ರವನ್ನು ದಾಖಲಿಸಲು ಯಾವ ರೀತಿ ಕ್ರಮ ಕೈಗೊಳ್ಳಬೇಕು ? | ಮಾಹಿತಿಯನ್ನು ಅಳವಡಿಸಲು ಕ್ರಮ ವಹಿಸಲಾಗಿದೆ. |
| 9 | ಸದರಿ ಆಸ್ತಿಯನ್ನು ದಾಖಲಿಸಲು ಚೆಕ್ ಬಂದಿ ಮತ್ತು ರಫ್ ಸ್ಕೇಚ್ ನೀಡಲು ಗ್ರಾಮ ಲೆಕ್ಕಿಗರು ಒಬ್ಬರೇ ದೃಢೀಕರಿಸಿಕೊಡಲು ನಿರಾಕರಿಸುತ್ತಾರೆ. | ಅವಕಾಶವಿರುವುದಿಲ್ಲ. ದಿ:03-02-2014 ರ ಸುತ್ತೋಲೆಯನ್ವಯ ತಹಶೀಲ್ದಾರ / ಕಂದಾಯ ಪರಿವೀಕ್ಷಕರು ಗ್ರಾಮಠಾಣಾ ದೃಢೀಕರಣ ನೀಡಬೇಕು. |
| 10 | ವಾರ್ಸ/ವಾಟ್ನಿ ಆದಾಗ ನಿವೇಶನ ಇದ್ದದ್ದನ್ನು ಕಟ್ಟಡ ಆಗಿ ಬದಲಾವಣೆ ಮಾಡುವುದು ಹೇಗೆ ? | ವಾರ್ಸ/ವಾಟ್ನಿ ಮಾಡಲು ಸೌಲಭ್ಯವಿರುತ್ತದೆ. ನಿವೇಶನದಿಂದ ಕಟ್ಟಡಕ್ಕೆ ಬದಲಾವಣೆ ಮಾಡಲು ಸೌಲಭ್ಯ ಕಲ್ಪಿಸಲಾಗಿದೆ. |
| 11 | ವಿಸ್ತೀರ್ಣ -ಅಳತೆ ಬದಲಾವಣೆ ಆದಾಗ ಅಂದರ ಅರ್ಧ ಜಾಗ ಖರೀದಿ ಆದಾಗ ಉಳಿದ ಅರ್ಧ ಜಾಗೆ ಇನ್ನೊಬ್ಬರ ಹೆಸರಿಗೆ ದಾಖಲು ಮಾಡುವುದು ಹೇಗೆ ? | ಮೊದಲು ವಿಭಾಗ ಮಾಡಿ ಅನಂತರ ಮಾರಾಟ ಮಾಡಬೇಕು. ಸಬ್ ರಿಜಿಸ್ಟರ್ ಕಛೇರಿಯಲ್ಲಿ ವಿಭಾಗ ಮಾಡಲು ಅವಕಾಶವಿಲ್ಲ. |
| 12 | ಎನ್.ಎ.ಆದ ಪ್ಲಾಟಗಳ ಕರನಿರ್ಧಾರಣಾ ಪಟ್ಟಿ ವಿತರಣೆ ಮಾಡುವಾಗ ಪ್ಲಾಟ ನಂಬರ್ ಎಂಟ್ರಿ ಮಾಡುವುದು ಹೇಗೆ ? | ನಕ್ಷೆ ಅನುಮೋದಿತ ಲೇಔಟ್ ಆಗಿದ್ದು, ಸದರಿ ಸ್ವತ್ತಿನ ಸಂಖ್ಯೆಯಲ್ಲಿ ಪ್ಲಾಟ್ ಸಂಖ್ಯೆಗಳನ್ನು ನೀಡಬಹುದು. |
| 13 | ವಗೈರೆ ಹೆಸರು ಹೇಗೆ ದಾಖಲಿಸುವುದು ಮತ್ತು ಅವರಿಂದ ಯಾವ ದಾಖಲಾತಿಗಳನ್ನು ಪಡೆದುಕೊಳ್ಳಬೇಕು? | ಎಲ್ಲಾ ಹೆಸರುಗಳನ್ನು ದಾಖಲಿಸಲು ಅವಕಾಶವಿದ್ದು, ವಗೈರೆ ಪದ ಉಪಯೋಗಿಸಬಾರದು. |
| 14 | ಒಟ್ಟು ಆಸ್ತಿಯಲ್ಲಿ ಅರ್ಧ ಜಾಗ ಖರೀದಿ ಆದಾಗ ಎ ಮತ್ತು ಬಿ ಅಂತಾ ಹೇಗೆ ಮಾಡಬೇಕು ? | ಖರೀದಿಗೆ ಮೊದಲು ವಿಭಾಗ ಮಾಡಿಕೊಳ್ಳಬೇಕು. ನಂತರ ಮ್ಯೂಟೇಷನ್ ಮಾಡ್ಯೂಲ್‌ನಲ್ಲಿ ಅವಕಾಶವಿದೆ. |
| 15 | ಹಕ್ಕುಗಳು (ಕಟ್ಟಡಗಳು) ಏನಾದರೂ ಬದಲಾವಣೆಗೊಂಡಲ್ಲಿ ಹೇಗೆ ಅಳವಡಿಸುವುದು ? | ಹಕ್ಕುಗಳ ಅರ್ಥ ಇತರರಿಗೆ ಸದರಿ ಸ್ವತ್ತಿನ ಮೇಲೆ ಇರುವ ಅಧಿಕಾರ. ಹಾಲಿ ಇರುವ ಮ್ಯೂಟೇಷನ್ ಮಾಡ್ಯೂಲ್‌ನಲ್ಲಿ ಅವಕಾಶವಿದೆ. |
| 16 | ಹೊಣೆಗಾರಿಕೆಗಳು ಕೂಡಿಸುವುದು ಮತ್ತು ತೆಗೆಯುವುದು ಹೇಗೆ ? | ಮ್ಯೂಟೇಷನ್ ಮಾಡ್ಯೂಲ್‌ನಲ್ಲಿ ಅವಕಾಶವಿದೆ |

| | | |
|---|---|---|
| 17 | ಈಗಿರುವ ಸ್ಥಳವನ್ನು ವಾಸಿಸುವ ಬದಲು ಕೈಗಾರಿಕೆಗೆ ಬಳಸಿದಾಗ ಅದನ್ನು ಅಳವಡಿಸುವುದು ಹೇಗೆ ? | ಮ್ಯೂಟೇಷನ್ ಮಾಡ್ಯೂಲ್‌ನಲ್ಲಿ ಸಂಬಂಧಪಟ್ಟವರಿಂದ ಅನುಮತಿ ಪಡೆದ ನಂತರ ಈ ಆಯ್ಕೆಯನ್ನು ಮಾಡಲು ಅವಕಾಶ ಕಲ್ಪಿಸಲಾಗಿದೆ. |
| 18 | ಎನ್ .ಎ ಅಂತ ಸೆಲೇಕ್ಟ ಮಾಡಿದಾಗ – ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಪರಿವರ್ತನೆ ಆದೇಶ. ಮತ್ತು ನಕ್ಷೆ ಇವುಗಳನ್ನು ದಾಖಲಿಸಬೇಕು. ಆದರೆ 1950 ರಲ್ಲಿ ಎನ್.ಎ. ಆದ ಪ್ಲಾಟಗಳಿಗೆ ಈ ದಾಖಲಾತಿಗಳು ಸರಿಯಾಗಿ ಲಭ್ಯವಾಗುತ್ತಿಲ್ಲಾ ಇದನ್ನು ದಾಖಲಿಸುವುದು ಹೇಗೆ ? | 1950 ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಮತ್ತು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಜಾರಿಗೆ ಬಂದಿರಲಿಲ್ಲ. ದಿ: 16–11–1992 ಮೊದಲು ಸ್ಥಳೀಯ ಯೋಜನಾ ಪ್ರಾಧಿಕಾರದ ಪ್ರದೇಶ ಹೊರಗಿನ ಆಸ್ತಿಗಳಿಗೆ ನಕ್ಷೆ ಅನುಮೋದನೆಯ ಅಗತ್ಯ ಇರಲಿಲ್ಲ. ಆದ್ದರಿಂದ ಇವುಗಳಿಗೆ ನಮೂನೆ–9 ಮತ್ತು 11ಎ ನೀಡಬಹುದು. |
| 19 | ಆಸ್ತಿಗಳನ್ನು ವಾರ್ಸಾ,ವಾಟ್ನಿ ಮಾಡಲು (ಹಕ್ಕು ಬದಲಾವಣೆ)ಗ್ರಾಮ ಪಂಚಾಯಿತಿಗೆ ಇದೆಯಾ ? ಇದ್ದ ಪಕ್ಷದಲ್ಲಿ ಅದರ ಬಗ್ಗೆ ಸಂಪೂರ್ಣವಾದ ವಿವರವನ್ನು ನೀಡುವುದು. | ಮ್ಯೂಟೇಷನ್ ಮಾಡ್ಯೂಲ್‌ನಲ್ಲಿ ಅವಕಾಶವಿದೆ |
| 20 | ಬೆಟಮೂರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮನೆಗಳ , ಕಟ್ಟಡಗಳಿಗೆ ಕಂದಾಯ ಇಲಾಖೆಯಿಂದ ಯಾವುದೇ ಮೂಲ ದಾಖಲಾತಿಯಿಲ್ಲ , ಅಳತೆ ಲಭ್ಯವಿಲ್ಲ ಆದರೆ ಹಿಂದಿನಿಂದಲೂ ಗ್ರಾಮ ಪಂಚಾಯತಿ ಆಸ್ತಿ ರಿಜಿಸ್ಟರ್‌ನಲ್ಲಿ ದಾಖಲಾತಿಯಿದ್ದು ತೆರಿಗೆ ಕಟ್ಟುತ್ತಿದ್ದಾರೆ, ಈಗ ಇ–ಸ್ವತ್ತುವಿನಲ್ಲಿ ಉತಾರ ನೀಡಲು ಕಂದಾಯ ಇಲಾಖೆ ದಾಖಲಾತಿ & ಆಸ್ತಿಯ ವಿಸ್ತೀರ್ಣ ನಮೂದಿಸುವುದು ಅವಶ್ಯವಿದೆ. ಈ ಮಾಹಿತಿ ಲಭ್ಯವಿಲ್ಲದಿರುವುದರಿಂದ ಮುಂದೆ ಏನು ಕ್ರಮ ಕೈಗೊಳ್ಳಬೇಕು. | ಗ್ರಾಮಠಾಣಾ ವ್ಯಾಪ್ತಿಯಲ್ಲಿದ್ದರೆ ತಹಶೀಲ್ದಾರರ ದೃಢೀಕರಣ ಬೇಕಾಗಿರುತ್ತದೆ. ಅಳತೆಗಳನ್ನು ಡಿಮ್ಯಾಂಡ್ ರಿಜಿಸ್ಟರ್ ನಿಂದ ಪಡೆದುಕೊಳ್ಳಬಹುದು. ಹಾಗೂ ಚೆಕ್ಕುಬಂಧಿಯನ್ನು ಸ್ಥಳ ಪರಿಶಿಲನೆಯಿಂದ ದಾಖಲಿಸುವುದು. |
| 21 | ಪುನರ್ ವಸತಿ ಕೇಂದ್ರಗಳ ಆಸ್ತಿಗಳಿಗೆ ಯಾವ ರೀತಿಯಾಗಿ ನಮೂನೆ – 9 & 11 ಎ ನೀಡಬಹುದು ? | ಪುನರ್ ವಸತಿ ಅಧಿಕಾರಿ ಕಛೇರಿಯಿಂದ ಅಗತ್ಯ ದೃಢೀಕರಣ ಪಡೆದುಕೊಂಡು ನಮೂನೆ 9 ಮತ್ತು 11ಎ ನೀಡಬಹುದು. |
| 22 | ಸಂಘ ಸಂಸ್ಥೆಗಳು ಮತ್ತಿತರ ಸಾಮೂಹಿಕ ಮಾಲಿಕತ್ವ ಹೊಂದಿದ ಆಸ್ತಿಗಳನ್ನು ಇ–ಸ್ವತ್ತು ತಂತ್ರಾಂಶದಲ್ಲಿ ಅಳವಡಿಸುವಾಗ ಮಾಲೀಕತ್ವದ ವಿವರಗಳನ್ನು ನಮೂದಿಸುವಲ್ಲಿ ಮತ್ತು ಇಂತಹ ಆಸ್ತಿಗಳ ಮಾಲಿಕರ ಗುರುತಿನ ದಾಖಲೆಗಳ ಬಗ್ಗೆ ತಂತ್ರಾಂಶದಲ್ಲಿ ಗೊಂದಲವಿದೆ. | ಸಂಘ ಸಂಸ್ಥೆಗಳ ಪ್ರತಿನಿಧಿಸಲು ಅಧಿಕಾರ ಅಧಿಕೃತ ಮಾಲೀಕತ್ವ ಹೊಂದಿರುವವರ ಅಧಿಕೃತ ಸಹಿ ಹಾಗು ಭಾವಚಿತ್ರ ಮತ್ತು ಇನ್ನಿತರೆ ಮಾಹಿತಿಗಳನ್ನು ನೀಡಬೇಕು |
| 23 | ಕೃಷಿಯೇತರ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಪರಿವರ್ತಿತಗೊಂಡಿರುವ ಗ್ರಾಮೀಣ ಪ್ರದೇಶದ ಆಸ್ತಿಗಳನ್ನು ಇ–ಸ್ವತ್ತು ತಂತ್ರಾಂಶದಲ್ಲಿ ಅಳವಡಿಸುವಾಗ ಪರಿವರ್ತನೆ | ಸ್ಥಳೀಯ ಯೋಜನಾ ಪ್ರಾಧಿಕಾರ ಅಸ್ತಿತ್ವಕ್ಕೆ ಬರುವ ಮೊದಲು ಅಥವಾ ದಿ:16–11–1992 ರ ಮೊದಲು ಭೂ ಪರಿವರ್ತನೆ (ಎನ್.ಎ) ಆಗಿದ್ದಲ್ಲಿ ಅಂತಹ ಆಸ್ತಿಗಳಿಗೆ ನಮೂನೆ 9 / 11ಎ ನೀಡಬಹುದು. ತದನಂತರ ಭೂ ಪರಿವರ್ತನೆ (ಎನ್.ಎ) ಆಗಿದ್ದಲ್ಲಿ ನಮೂನೆ 11ಬಿ ನೀಡಬಹುದು. |

| | | |
|---|---|---|
| | ಆದೇಶದ ಜೊತೆಗೆ ನಗರ/ಗ್ರಾಮಾಂತರ ಯೋಜನಾ ಪ್ರಾಧಿಕಾರದ ಅನುಮೋದನೆ ಆದೇಶ ಹಾಗು ನಕ್ಷೆ ಮತ್ತು ಸಕ್ಷಮ ಪ್ರಧಿಕಾರದ ನಿವೇಶನ ಬಿಡುಗಡೆ ಆದೇಶವನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಇವುಗಳು ಲಭ್ಯವಿಲ್ಲದ್ದರಿಂದ ಪರಿಹಾರವೇನು ? | ನಮೂನೆಯಲ್ಲಿ ತಿಳಿಸಿರುವ ಸಂಬಂಧಿಸಿದ ದಾಖಲೆಗಳನ್ನು ಪಡೆಯಬಹುದು. |
| 24 | ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿತವಾಗದ ವ್ಯಕ್ತಿಯ ಮಾಲೀಕತ್ವದಲ್ಲಿರುವ ಜಮೀನನ್ನು ಕೇವಲ ಒಪ್ಪಂದದ ಆಧಾರದ ಮೇಲೆ ತುಂಡು ಭೂಮಿಯನ್ನು ಪಡೆದು ಸೃಜಿಸಲಾದ ಆಸ್ತಿಗೆ ಈಗಾಗಲೇ ಕರಾಕರಣೆ ಮಾಡಲಾಗುತ್ತಿರುತ್ತದೆ. ಆದರೆ ಈ ಆಸ್ತಿಯ ಭೂಮಿಗೆ ಸಂಬಂಧಿಸಿದ ಕಂದಾಯ ಇಲಾಖೆಯ ಪಹಣಿಯಲ್ಲಿ ಮೂಲ ಮಾಲೀಕನ ಹೆಸರೇ ಇರುತ್ತದೆ. ಇಂತಹ ಆಸ್ತಿಗಳಿಗೆ ನಮೂನೆ – 11 ಬಿ ನೀಡಬಹುದೇ? ಹೌದಾದಲ್ಲಿ ಅಗತ್ಯ ಧಾಖಲೆಗಳೇನು? | ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಇದಕ್ಕೆ ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟ ಉಂಟು ಮಾಡುವ ಕ್ರಿಯಾ ಆಗಿದ್ದು, ಸೂಕ್ತ ಕ್ರಮ ಜರುಗಿಸಲು ಸಂಬಂಧಿಸಿದ ಇಲಾಖೆಯ ಗಮನಕ್ಕೆ ತರುವುದು. |
| 25 | ಈಗಾಗಲೇ ಕರಾಕರಣೆ ಮಾಡುತ್ತಿರುವ ದಿನಾಂಕ: 14-06-2013 ಗಿಂತ ಪೂರ್ವದಲ್ಲಿ ಸೃಜಿಸಲಾದ ಆಸ್ತಿಗಳನ್ನು ಕಾರಣಾಂತರಗಳಿಂದ ಪಂಚತಂತ್ರದಲ್ಲಿ ಅಳವಡಿಸಲಾಗಿಲ್ಲ. ಅಂತಹ ಆಸ್ತಿಗಳನ್ನು ಅಳವಡಿಸಲು ಪಂಚತಂತ್ರದಲ್ಲಿ ಅವಕಾಶ ಕಲ್ಪಿಸುವುದಾಗಿ ಸುತ್ತೋಲೆಯಾಗಿದ್ದರೂ ಪಂಚತಂತ್ರದಲ್ಲಿ ಇನ್ನೂ ಈ ಆಯ್ಕೆ ಲಭ್ಯವಿಲ್ಲ. | ಇ-ಸ್ವತ್ತು ತಂತ್ರಾಂಶದಲ್ಲಿ ದಾಖಲಿಸಿದರೆ ಪಂಚತಂತ್ರ ತಂತ್ರಾಂಶಕ್ಕೆ ತಾನಾಗಿಯೇ ವರ್ಗಾವಣೆಯಾಗುತ್ತದೆ. ನಮೂನೆ 11ಬಿ ಎಂದು ದಾಖಲಿಸುವ ಸ್ವತ್ತುಗಳನ್ನು ನಿಯಮಾನುಸಾರ ನಮೂನೆ 9 ಕ್ಕೆ ವರ್ಗಾಯಿಸಲು ಅವಕಾಶ ಕಲ್ಪಿಸಲಾಗಿದೆ. ಜೊತೆಗೆ ಕಾರಣಾಂತರಗಳಿಂದ ಪಂಚತಂತ್ರದಲ್ಲಿ ಅಳವಡಿಸಲಾಗದ ಆಸ್ತಿಗಳನ್ನು ಅಳವಡಿಸಲು ಒಂದು ಬಾರಿಯ ಅವಕಾಶ ನೀಡಲಾಗುತ್ತಿದೆ. |
| 26 | ಈಗಾಗಲೇ ಕರಾಕರಣೆ ಮಾಡುತ್ತಿರುವ ದಿನಾಂಕ: 14-06-2013 ಗಿಂತ ಪೂರ್ವದಲ್ಲಿ ಸೃಜಿಸಲಾದ ಆಸ್ತಿಗಳನ್ನು ಕಾರಣಾಂತರಗಳಿಂದ ಪಂಚತಂತ್ರದಲ್ಲಿ ಅಳವಡಿಸಿರುವ / ಅಳವಡಿಸಲಾಗದ ಆಸ್ತಿಗಳಿಗೆ ನಮೂನೆ-11 ಬಿ ನೀಡಬಹುದಾದ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ-11ಬಿ ಆಧಾರದ ಮೇಲೆ ದಿನಾಂಕ:14-06-2013 ಗಿಂತ ಮೊದಲಿನ ವಿದ್ಯುತ್ ಬಿಲ್/ಖಾತೆ ವಿವರಗಳನ್ನು ಆಧರಿಸಿ ನೊಂದಣಿ ಮಾಡಲು ಅವಕಾಶವಿರುತ್ತದೆ. ಆದರೆ ದಿನಾಂಕ: 14-06-2013 ಪೂರ್ವದಲ್ಲಿ ಕರಾಕರಣೆಗೊಳಪಟ್ಟ ನಿವೇಶನಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಬಿಲ್/ ಖಾತೆ ವಿವರಗಳು ಲಭ್ಯವಿರುವುದಿಲ್ಲವಾದ್ದರಿಂದ | ವಿದ್ಯುತ್ ಬಿಲ್ ಕಡ್ಡಾಯವಾಗಿರುತ್ತದೆ. ನಮೂನೆ 11ಬಿ ನೀಡಬಹುದಾಗಿದ್ದು, ಆದರೆ ವಿದ್ಯುತ್‌ಬಿಲ್ ಇಲ್ಲದಿದ್ದಲ್ಲಿ ನೊಂದಾಯಿಸಲು ಅವಕಾಶವಿರುವುದಿಲ್ಲ. |

| | | |
|---|---|---|
| | ಇಂತಹ ಆಸ್ತಿಗಳ ಬಗೆಗಿನ ಪರಿಹಾರವೇನು? | |
| 27 | ದಿನಾಂಕ:14-06-2013 ಪೂರ್ವದಲ್ಲಿ ಸೃಜಿಸಲಾದ ನಮೂನೆ-11ಬಿ ನೀಡಬಹುದಾದ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದಲ್ಲಿ ಅವಕಾಶವಿರುತ್ತದೆ. ಆದರೆ ದಿನಾಂಕ:14-06-2013 ನಂತರದಲ್ಲಿ ಪರಿವರ್ತನೆ ಯಾಗದ ಕೃಷಿಭೂಮಿಯಲ್ಲಿ ಸೃಜನೆ ಯಾಗುತ್ತಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಇ-ಸ್ವತ್ತು ತಂತ್ರಾಂಶದಲ್ಲಿ ಪರಿಹಾರವೇನು? | ಇಂತಹ ಘಟನೆಗಳು ಕಂಡು ಬಂದ ತಕ್ಷಣ ನಗರ ಯೋಜನಾ ನಿರ್ದೇಶನಾಲಯ ಮತ್ತು ಕಂದಾಯ ಇಲಾಖೆಯ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಬೇಕು. |
| 28 | ಈ ಹಿಂದೆ ಹಾಗೂ ಪ್ರಸ್ತುತದಲ್ಲಿಯೂ ಸ್ವಂತ ನಿವೇಶನವಿಲ್ಲದ ಫಲಾನುಭವಿಗಳು ಬೇರೆಯವರ ಕೃಷಿ ಭೂಮಿಯಲ್ಲಿ ಸ್ವಲ್ಪ ಭಾಗವನ್ನು ಪಡೆದು ತತ್ಸಂಬಂಧವಾಗಿ ಕೇವಲ ನೋಟರಿಯವರಿಂದ ಸದರಿ ಭೂಮಿ ಕುರಿತ ಹಕ್ಕನ್ನು ಫಲಾನುಭವಿಗೆ ಬಿಟ್ಟು ಕೊಟ್ಟಿರುವುದಾಗಿ ಒಪ್ಪಂದ ಪತ್ರವನ್ನು ಸಲ್ಲಿಸಿರುತ್ತಾರೆ. ಇಂತಹ ನಿವೇಶನಕ್ಕೆ ಇ-ಸ್ವತ್ತು ಅಡಿಯಲ್ಲಿ ನಮೂನೆ-11ಬಿ ನೀಡಬಹುದೇ? ಹೌದಾದಲ್ಲಿ ಸದರಿ ನಿವೇಶನವು ವಸತಿ ಯೋಜನೆಯಡಿ ಮನೆ ಮಂಜೂರು ಮಾಡಲು ಅರ್ಹವೇ? | ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಇದಕ್ಕೆ ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟ ಉಂಟು ಮಾಡುವ ಪ್ರಕ್ರಿಯೆ ಆಗಿದ್ದು, ಸೂಕ್ತ ಕ್ರಮ ಜರುಗಿಸಲು ಸಂಬಂಧಿಸಿದ ಇಲಾಖೆಯ ಗಮನಕ್ಕೆ ತರುವುದು. |
| 29 | ಗ್ರಾಮಠಾಣಾ ಆಸ್ತಿಗಳಿಗೆ ತಹಶೀಲ್ದಾರರು ಆಸ್ತಿಯು ಗ್ರಾಮಠಾಣಾ ಒಳಗೆ / ಹೊರಗೆ ಎಂದು ಮಾತ್ರ ದೃಢೀಕರಿಸುವುದಾದರೆ, ಸ್ವತ್ತಿನ ಅಳತೆ ಮತ್ತು ಚೆಕ್ಕುಬಂಧಿ ದೃಢೀಕರಿಸುವವರು ಯಾರು? | ಗ್ರಾಮಠಾಣಾ ಒಳಗಿನ ಸ್ವತ್ತಿನ ಅಳತೆ ಮತ್ತು ಚೆಕ್ಕುಬಂಧಿಯನ್ನು ಗ್ರಾಮ ಪಂಚಾಯತಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ದೃಢೀಕರಿಸಬೇಕು. |
| 30 | ದಿನಾಂಕ:14-06-2013ರ ನಂತರ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆ ಆದ ಜಮೀನುಗಳಿಗೆ ನಮೂನೆ 11ಬಿ ನೀಡುವ ಕ್ರಮ ವಹಿಸಬಹುದೇ. | ಪೂರ್ತಿ ಜಮೀನಿಗೆ ನಮೂನೆ 11ಬಿ ಕೊಟ್ಟು ತೆರಿಗೆ ವಸೂಲಾತಿ ಮಾಡಬಹುದು. ಆದರೆ ನಿವೇಶನ ಮಾರಲು ಲೇಔಟ್ ಅನುಮೋದನೆ ಪಡೆಯಬೇಕು. |
| 31 | ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆಯಾಗಿ ಪಿತ್ರಾರ್ಜಿತ ಆಸ್ತಿಯಾಗಿದ್ದು, ನಿವೇಶನಗಳನ್ನು ವಿಂಗಡಿಸದೇ ಈವರೆವಿಗೂ ಕ್ರಯ ಪತ್ರ ಆಗದೇ ಇದ್ದು, ಮಾಲಿಕರ ಹೆಸರಿನಲ್ಲಿ ಇರುತ್ತದೆ ಅಂತಹ ಸ್ವತ್ತಿಗೆ 11ಬಿ ನೀಡುವ ಕ್ರಮ ವಹಿಸಬಹುದೆ. | ನಮೂನೆ 11 ಬಿ ನೀಡಬಹುದು. ಆದರೆ ಲೇಔಟ್ ನಕ್ಷೆ ಅನುಮೋದನೆ ಇಲ್ಲದೆ ನೊಂದಣಿಗೆ ಅವಕಾಶವಿರುವುದಿಲ್ಲ. |
| 32 | 1975ನಲ್ಲಿ ವಸತಿ ಯೋಜನೆಯಡಿ ಉಚಿತ ನಿವೇಶನಗಳನ್ನು ನೀಡಲಾಗಿತ್ತು ಯಾರ ಬಳಿಯೂ ಹಕ್ಕುಪತ್ರ ಇರುವುದಿಲ್ಲ. ಆದರೆ | ತೆರಿಗೆ ನಿರ್ಧರಣಾ ಪಟ್ಟಿ ಆಧಾರದ ಮೇಲೆ ನಮೂನೆ-11 ಬಿ ನೀಡಬಹುದು. ಮಾರಾಟಕ್ಕೆ ಅವಕಾಶವಿರುವುದಿಲ್ಲ. |

| | | |
|---|---|---|
| | ಪಂಚಾಯತಿ ದಾಖಲೆಗಳನ್ನು ಅವರ ಹೆಸರು ನಮೂದಾಗಿದ್ದು, ಅಂತಹ ಫಲಾನುಭವಿಗಳಿಗೆ ನಮೂನೆ 9, 11 ಮತ್ತು 11ಬಿ ನೀಡುವ ಬಗ್ಗೆ ಕ್ರಮ ವಹಿಸಬಹುದೇ | |
| 33 | 14-06-2013ರ ಹಿಂದೆ 100*100 ನಿವೇಶನ ಕೊಂಡಿರುತ್ತಾರೆ. ಇದರಲ್ಲಿ ಈಗ 20 ಪ್ಲಾಟ್ ಕಟ್ಟಿರುತ್ತಾರೆ. ಇವರಿಗೆ 11ಬಿ ನೀಡಲು ಕ್ರಮ ವಹಿಸಬಹುದೇ. | ದಿನಾಂಕ:14-06-2013 ರ ಪೂರ್ವದ ವಿದ್ಯುತ್ ಬಿಲ್ ಪಡೆದು ನಮೂನೆ 11ಬಿ ನೀಡಬಹುದು. |
| 34 | ದಿ: 14-06-2013 ರ ಹಿಂದೆ ಭೂಪರಿವರ್ತನೆಯಾಗಿದ್ದು, 14-06-2013 ರ ನಂತರ ಸ್ವತ್ತು ಕ್ರಯಪತ್ರದ ಮುಖಾಂತರ ಮಾರಾಟವಾಗಿದ್ದು, ಸದರಿಯವರಿಂದ ಕಂದಾಯ ಪಾವತಿಸಿಕೊಂಡು 11ಬಿ ನೀಡಲು ಕ್ರಮ ವಹಿಸಬಹುದೇ. | ನಮೂನೆ 11ಬಿ ನೀಡಬಹುದು. ಕಂದಾಯ ವಸೂಲಿ ಮಾಡಬಹುದು. ಆದರೆ ಮಾರಾಟ ಮಾಡಲು ಬರುವುದಿಲ್ಲ. |
| 35 | ಫಾರಂ 11 ಬಿ ಕರಾವಳಿ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ CRZ ನಿಯಮಗಳನ್ನು ಉಲ್ಲಂಘಿಸಿ, ದಿನಾಂಕ: 14-06-2013 ಕ್ಕೆ ಮುಂಚೆ ನಿರ್ಮಿಸಿಕೊಂಡಿರುವ ಆಸ್ತಿಗಳಿಗೆ ನಮೂನೆ 11ಬಿ ಕೊಡಬಹುದೇ. | ನಮೂನೆ 11ಬಿ ನೀಡಲು ಬರುವುದಿಲ್ಲ. |
| 36 | ದಿನಾಂಕ:14-06-2013 ಕ್ಕೆ ಮುಂಚೆ ಸೃಜಿಸಿರುವಂತಹ ವಸತಿ ಆಸ್ತಿಯಲ್ಲಿ ವಿಂಗಡಣೆಯಾಗಿರುವುದಕ್ಕೆ ನಮೂನೆ-11 ಬಿ ಕೊಡಬಹುದೇ. | ನಮೂನೆ 11ಬಿ ನೀಡಬಹುದು. |
| 37 | ಸುತ್ತೋಲೆಗಳಲ್ಲಿ ವಸತಿ ಯೋಜನೆಯಡಿ (ಬಸವ, ಇಂದಿರಾಆವಾಸ್ ಮತ್ತು ಗ್ರಾಮೀಣ ಅಂಬೇಡ್ಕರ್ ಯೋಜನೆಗಳನ್ನು ಮಾತ್ರ ನಮೂದಿಸಲಾಗಿರುತ್ತದೆ. ಬೇರೆ ವಸತಿ ಯೋಜನೆಗಳಿಗೂ ನಮೂನೆ 9 ಮತ್ತು 11ಎ ನೀಡಲು ಸಾಧ್ಯವೇ | ನೀಡಬಹುದು. |
| 38 | ತಾಯಿ ಹೆಸರಿನಲ್ಲಿ ತೆರಿಗೆ ನಿರ್ಧರಣೆ ಪಟ್ಟಿ ಮತ್ತು ನೋಂದಣಿ ಇದೆ. ತಾಯಿ ಮರಣ ಹೊಂದುವಾಗ ತಂಗಿ ಮಗನಿಗೆ ವಿಲ್ ಮಾಡಿರುತ್ತಾರೆ. (ಇದು ತಾಯಿಯ ಪಿತ್ರಾರ್ಜಿತ ಮನೆ) ಈಗ ಮೃತ ಹೆಂಡತಿಯ ಪತಿ ಗ್ರಾಮ ಪಂಚಾಯತಿಗೆ ತೆರಿಗೆ ನಿರ್ಧರಣೆಗೆ ಪಟ್ಟಿ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದಾರೆ. ಇದಕ್ಕೆ ಕಾನೂನಿನ ಸ್ಥಿತಿ ಏನು? ನಾವು ಏನು ಮಾಡಬಹುದು. | ನ್ಯಾಯಾಲಯದಲ್ಲಿ ಇತ್ಯರ್ಥಪಡಿಸಿಕೊಳ್ಳಬೇಕಾಗುತ್ತದೆ. |

| | | |
|---|---|---|
| 39 | ಮಾಗಡಿ ಎಲ್‌ಪಿಎ ನಲ್ಲಿ ಮಧ್ಯಂತರ ಮಹಾವಲಯ ನಿಯಮಾವಳಿ ಪ್ರಕಾರ 9.36 ಎಕರೆ ಇದ್ದಾಗ ಹೊಸಬಡಾವಣೆ ಮಾಡಲು ಎಲ್.ಪಿ.ಎ ಲೇಔಟ್ ಪ್ಲಾನ್ ಅನುಮೋದನೆ ಕೊಡುತ್ತಾರೆ. ಆದರೆ ಇಲ್ಲಿ 4.5 ಎಕರೆಗೆ ಭೂ ಪರಿವರ್ತನೆ ಮಾಡಿಕೊಂಡು 11 ಬಿ ಗೆ ಅರ್ಜಿ ಸಲ್ಲಿಸಿದ್ದಾರೆ. 1 ಬಾರಿ ನೋಂದಣಿಯಾಗಿದೆ. 11ಬಿ ಕೊಡಬಹುದೇ. ಎಲ್.ಪಿ.ಎ. ಅನುಮೋದನೆ ಪಡೆದಿರುವುದಿಲ್ಲ. | ನಿವೇಶನ ನೋಂದಣಿಯಾಗಿದ್ದರೆ ನಮೂನೆ-11ಬಿ ನ್ನು ನೀಡಬಹುದು ಮತ್ತು ನೊಂದಣಿಗೆ ಅವಕಾಶವಿರುತ್ತದೆ. ಪೂರ್ತಿ ಜಮೀನು ನೋಂದಣಿಯಾಗಿದ್ದರೆ ನಮೂನೆ 11ಬಿ ನ್ನು ನೀಡಬಹುದು. ಆದರೆ ನೊಂದಣಿಗೆ ಅವಕಾಶವಿರುವುದಿಲ್ಲ. |
| 40 | ದಿನಾಂಕ:14-06-2013 ಕ್ಕಿಂತ ಮುಂಚಿತವಾಗಿ ಕುರಗೋಡು ಗ್ರಾಮ ಪಂಚಾಯತಿಯ ಆಸ್ತಿ ವಹಿಯಲ್ಲಿ ನೊಂದಣಿಯಾಗಿದ್ದು, ತೆರಿಗೆಯನ್ನು ಕಟ್ಟುತ್ತಿದ್ದಾರೆ. ಆದರೆ ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯ ಅನುಮೋದನೆಯಾಗಿರುವುದಿಲ್ಲ. ಇದರಲ್ಲಿ ಕೆಲವೊಂದು ಪ್ಲಾಟ್‌ಗಳು ಟ್ರಾಂಜಕ್ಷನ್ ಆಗಿವೆ. ಕೆಲವೊಂದು ಪ್ಲಾಟ್‌ಗಳು ಮಾಲೀಕರ ಹೆಸರಿನಲ್ಲಿ ಇವೆ. ಇಂತಹವುಗಳಿಗೆ ನಮೂನೆ 9, 11ಎ ಅಥವಾ 11ಬಿ ಕೊಡಬಹುದೇ | ಮಾರಾಟವಾಗಿರುವುದಕ್ಕೆ ನಮೂನೆ 11ಬಿ ನ್ನು ಕೊಡಬಹುದು ಮತ್ತು ನೊಂದಣಿ ವಿವರಗಳನ್ನು ಪಡೆದು ದಾಖಲಿಸಿದ್ದರೆ ಮರು ನೊಂದಣಿಗೆ ಅವಕಾಶವಿರುತ್ತದೆ. ಮಾಲೀಕರ ಹೆಸರಿನಲ್ಲಿರುವ ನಿವೇಶನಗಳಿಗೆ ನಮೂನೆ 11 ಬಿ ನ್ನು ಕೊಡಬಹುದು. ಆದರೆ ನೊಂದಣಿಗೆ ಅವಕಾಶವಿರುವುದಿಲ್ಲ. |
| 41 | ನಗರಾಭಿವೃದ್ಧಿ ಪ್ರಾಧಿಕಾರದ ಹೊರಗೆ ಬರುವ (ಭೂ ಪರಿವರ್ತನೆ) ಆಗಿರುವ ಆಸ್ತಿಗಳಿಗೆ ನಮೂನೆ-9 ಮತ್ತು 11ಎ ನ್ನು ನೀಡಬಹುದೇ. | ದಿನಾಂಕ:14-06-2013 ರ ಪೂರ್ವದಲ್ಲಿನ ಆಸ್ತಿಗಳಿಗೆ ಕೊಡಬಹುದು. ಆದರೆ 14-06-2013 ರ ನಂತರದಲ್ಲಿನ ಆಸ್ತಿಗಳಿಗೆ ತಾಲ್ಲೂಕು ಪಂಚಾಯತಿಯಿಂದ ಲೇಔಟ್ ನಕ್ಷೆಗೆ ಅನುಮತಿ ಪಡೆಯಬೇಕು. |
| 42 | ಗ್ರಾಮಠಾಣಾ ವ್ಯಾಪ್ತಿಯ ಹೊರಗೆ ಇರುವ ಖಾಲಿ ನಿವೇಶನಗಳಿಗೆ ನಮೂನೆ 11ಬಿ ನೀಡಬಹುದೇ | ತೆರಿಗೆ ಉದ್ದೇಶಕ್ಕಾಗಿ ನಮೂನೆ 11ಬಿ ನ್ನು ನೀಡಬಹುದು. ಆದರೆ ನೊಂದಣಿ ಮಾಡಲು ಅವಕಾಶವಿರುವುದಿಲ್ಲ. |
| 43 | ನಗರಾಭಿವೃದ್ಧಿ ಪ್ರಾಧಿಕಾರದ ಒಳಗೆ ಬರುವ ಗ್ರಾಮಪಂಚಾಯತಿಗಳಲ್ಲಿ ದಿ:14-06-2013 ರೊಳಗೆ ಭೂ ಪರಿವರ್ತನೆಯಾಗಿರುವ ಆಸ್ತಿಗಳಿಗೆ ಗ್ರಾಮ ಪಂಚಾಯತಿಯಿಂದ ಲೇಔಟ್ ಅನುಮೋದನೆ ನೀಡಿರುವ ಆಸ್ತಿಗಳಿಗೆ ನಮೂನೆ-9, 11ಎ ಅಥವಾ 11ಬಿ ನೀಡಬಹುದೇ. | ದಿನಾಂಕ:16-11-1992 ರ ಪೂರ್ವದಲ್ಲಿ ಗ್ರಾಮ ಪಂಚಾಯತಿಯಿಂದ ಲೇಔಟ್ ಅನುಮೋದನೆಯಾಗಿದ್ದರೆ ನಮೂನೆ-9 ಮತ್ತು 11ಬಿ ನೀಡಬಹುದು.<br><br>ದಿನಾಂಕ: 16-11-1992 ರಂದು ಅಥವಾ ನಂತರ ಗ್ರಾಮ ಪಂಚಾಯತಿಯಿಂದ ಅನುಮೋದನೆಯಾಗಿದ್ದಲ್ಲಿ ನಮೂನೆ 11ಬಿ ನೀಡಬಹುದು. |
| 44 | ಇ-ಸ್ವತ್ತು ಮುಖಾಂತರ ನೀಡಿದ ನಮೂನೆ 9,11 ಎ ನ್ನು ಮ್ಯುಟೇಷನ್ ಮಾಡುವಾಗ ಕೇವಲ ಗುರುತಿನ ದಾಖಲೆಗಳನ್ನು ಕೇಳುತ್ತದೆ. ಆದರಲ್ಲಿ ಮೊದಲನೆ ವ್ಯಕ್ತಿಯ ಗುರುತಿನ ದಾಖಲೆಗಳನ್ನು ತೆಗೆದುಹಾಕಬೇಕೇ ಅಥವಾ ಇರಬೇಕೇ. | ಎಲ್ಲಾ ಮಾಲೀಕರ ಗುರುತಿನ ದಾಖಲೆ ಬೇಕಾಗಿರುತ್ತದೆ. |

| | | |
|---|---|---|
| 45 | ಸರ್ವೆ ನಂ. ಜಾಗದಲ್ಲಿ ವಸತಿ ಯೋಜನೆಯಡಿ ಮಂಜೂರಾದ ಫಲಾನುಭವಿಗೆ 2 ಗುಂಟೆ ಜಾಗದಲ್ಲಿ ಎನ್.ಎ. ಮಾಡಲು ಅವಕಾಶವಿರುತ್ತದೆ. ಇದನ್ನು ಇ-ಸ್ವತ್ತಿನಲ್ಲಿ ಹೇಗೆ ಮಾಡಬೇಕು. | ಮ್ಯೂಟೇಷನ್ ಮಾಡ್ಯೂಲ್‌ನಲ್ಲಿ ಅವಕಾಶವಿರುತ್ತದೆ. |
| 46 | ಈಗಾಗಲೇ - ರೆವಿನ್ಯೂ ಲ್ಯಾಂಡನಲ್ಲಿ ಮನೆಗಳಿದ್ದುದ್ದನ್ನು ನಮೂನೆ 9 ರಲ್ಲಿ ದಾಖಲು ಮಾಡಿ ಕೊಡಲಾಗಿರುತ್ತದೆ. ಆದರೆ ಪಂಚತಂತ್ರದಲ್ಲಿ ಅಳವಡಿಸಿರುವುದಿಲ್ಲ. ಇದನ್ನು ಇ-ಸ್ವತ್ತಿನಲ್ಲಿ ಹೇಗೆ ಮಾಡಬಹುದು. | ಈಗ ಎಲ್ಲಾ ದಾಖಲೆ ಪರಿಶೀಲಿಸಿ, ಸೂಕ್ತ ಕ್ರಮ ವಹಿಸಿ. ನಮೂನೆ 9 / 11ಬಿ ನ್ನು ಕೊಟ್ಟು ಇ-ಸ್ವತ್ತು ಹಾಗೂ ಪಂಚತಂತ್ರದಲ್ಲಿ ಅಳವಡಿಸುವುದು. |
| 47 | ಪಂಚತಂತ್ರ ಮೂಲಕ ನಮೂನೆ 9, 11ಎ ಮತ್ತು 11ಬಿ ವಿತರಣೆ ಪ್ರಕ್ರಿಯೆಯ Flow Chart ನೀಡುವುದು. | ಪಂಚತಂತ್ರ ತಂತ್ರಾಂಶದಲ್ಲಿ ಇದಕ್ಕೆ ಅವಕಾಶವಿರುವುದಿಲ್ಲ. ಇ-ಸ್ವತ್ತು ತಂತ್ರಾಂಶದಲ್ಲಿ Flow Chart ಕೆಳಗಿನಂತೆ ಇರುತ್ತದೆ. |
| 48 | ನಮೂನೆ 9 ಮತ್ತು 11 ಕೊಡುವಾಗ ಅಳತೆ ತಪ್ಪಾಗಿ ನಮೂದಿಸಿದ ಪಕ್ಷದಲ್ಲಿ ಅವುಗಳನ್ನು ರದ್ದುಪಡಿಸಿ ಬೇರೆ ಕೊಡಲು ಅವಕಾಶ ಇದೆಯೇ. | Correction option ನಲ್ಲಿ ದಾಖಲಿಸಿ, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ-ಅನುಮೋದನೆ ಪಡೆದು ವಿವರಗಳನ್ನು ಬದಲಿಸಬಹುದು. |
| 49 | ಕೆಲವು ವರ್ಷಗಳ ಹಿಂದೆ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿರುತ್ತಾರೆ. ಆದರೆ ಈಗ ಫಲಾನುಭವಿಗಳು ಹಕ್ಕು ಪತ್ರ ಕಳೆದುಕೊಂಡಿರುತ್ತಾರೆ. ಈಗ ಅದರ ನಕಲು ಪ್ರತಿಯು ಸಹ ಸಿಗುವುದಿಲ್ಲವೆಂದು ತಿಳಿಸಿರುತ್ತಾರೆ. ಈಗ ಅವರಿಗೆ ಯಾವ ನಮೂನೆಯನ್ನು ವಿತರಿಸಬೇಕಾಗಿರುತ್ತದೆ. | ತೆರಿಗೆ ನಿರ್ಧರಣಾ ಪಟ್ಟಿ ಆಧಾರದ ಮೇಲೆ ನಮೂನೆ-11 ಬಿ ನೀಡಬಹುದು. ಮಾರಾಟಕ್ಕೆ ಅವಕಾಶವಿರುವುದಿಲ್ಲ. |
| 50 | ಆಸ್ತಿ ರಿಜಿಸ್ಟರ್‌ನಲ್ಲಿ ಇರುವ ಎಲ್ಲಾ ಆಸ್ತಿಗಳು ಪೂರ್ಣವಾಗಿ ಪಂಚತಂತ್ರದಲ್ಲಿ ದಾಖಲಾಗಿರುವುದಿಲ್ಲ. ಇದರ ಬಗ್ಗೆ ಯಾವ ರೀತಿ ಕ್ರಮ ವಹಿಸಬೇಕು. | |
| 51 | 2003-04 ನೇ ಸಾಲಿನವರೆಗೆ ಒಬ್ಬ ವ್ಯಕ್ತಿಯ ಹೆಸರಿಗೆ ದಾಖಲೆ ಇದ್ದು, ವಾರಸುದಾರರು ಸಂಬಂಧಪಟ್ಟ ಸ್ವತ್ತಿನಲ್ಲಿ ಇಲ್ಲದೆ ಇರುವ ಕಾರಣ ಬೇರೆಯವರ ಹೆಸರಿಗೆ ಮಾರಾಟ ಮಾಡಿದ್ದು, ನ್ಯಾಯಾಲಯದಲ್ಲಿ 2007-08 ರಲ್ಲಿ ಸದರಿ ಸ್ವತ್ತು ಸೇರಿರುವಂತೆ ನ್ಯಾಯಾಲಯದ ಆದೇಶವಿರುತ್ತದೆ. ಇ-ಸ್ವತ್ತು ಹೇಗೆ ದಾಖಲಿಸುವುದು. | ಪೂರಕ ದಾಖಲೆಗಳನ್ನು ಪಡೆದು ಸೇರಿಸಬಹುದು. |

| | | |
|---|---|---|
| 52 | ಗ್ರಾಮಠಾಣಾ ಜಾಗದಲ್ಲಿ ಅಡಿಕೆ ತೋಟವಿರುತ್ತದೆ. ಈ ನಿವೇಶನಕ್ಕೆ ಇ-ಸ್ವತ್ತು ದಾಖಲೆ ನೀಡಬಹುದೇ | ನಿಯಮಾನುಸಾರ ಖಚಿತಪಡಿಸಿಕೊಂಡು ನಮೂನೆ 9, 11ಎ. ನ್ನು ನೀಡಬಹುದು. |
| 53 | ಕೆಲವು ಹಳ್ಳಿಗಳ ಹೆಸರು ಇ-ಸ್ವತ್ತು ತಂತ್ರಾಂಶದಲ್ಲಿ ಬರುತ್ತಿಲ್ಲ. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ಎಲ್ಲಾ ತಾಲ್ಲೂಕುಗಳಿಂದ ಮಾಹಿತಿ ಪಡೆದು ನಿರ್ದೇಶಕರು (ಪಂ.ರಾಜ್) ರವರಿಗೆ ಜಿಲ್ಲೆಗಳಲ್ಲಿ ಸರಿಪಡಿಸಬೇಕಾದ /ಸೇರಿಸಬೇಕಾದ ಎಲ್ಲಾ ಗ್ರಾಮಗಳ ವಿವರ ಸಲ್ಲಿಸಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. |

ಕೆ. ಯಶಲಕ್ಷ್ಮಿ ಗೌಡ
ನಿರ್ದೇಶಕರು (ಪಂ.ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.